ತಾವೇ ನೋಡುತ್ತಿದ್ದೀರಿ. ಅದು ವಾಹನಗಳಿಂದ ಆಗುತ್ತಿರಬಹುದು, ಕಾರ್ಖಾನೆಗಳಿಂದ ಆಗುತ್ತಿರಬಹುದು.

MR.SPEAKER : You are only referring to environmental pollution.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. Unless you enforce the stringent laws, you cannot solve this problem.

ದಯಾಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಲು ಈಗ ಇರುವ ಕಾಯಿದೆಗಳ ಜೊತೆಗೆ ಸ್ಟ್ರಿಂಜೆಂಟ್ ಲಾಸ್‌ಗಳನ್ನು ತಂದು ಅವನ್ನು ಎಕ್ಸಿಕ್ಯೂಷನ್ ಲೆವೆಲ್‌ನಲ್ಲಿ ಬಹಳ ಸ್ಟ್ರಿಂಜೆಂಟಾಗಿ ನೀವು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು :- ಒಳ್ಳೆಯ ಸಲಹೆ ಮಾಡಿದ್ದೀರಿ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಬೇಕಾದ ಕ್ರಮವನ್ನು ಅನುಸರಿಸದೇ ಇರುವಂಥ ಸುಮಾರು 225ಕ್ಕಿಂತ ಹೆಚ್ಚಿನ ಕೇಸುಗಳನ್ನು ದಾಖಲಾತಿ ಮಾಡಿದ್ದೇವೆ. ಇವೆಲ್ಲವೂ ಕೋರ್ಟಿನಲ್ಲಿ ಇವೆ. ಆ ಕೋರ್ಟಿನಲ್ಲಿ ಇರುವಂಥ ಕೇಸುಗಳು ಡಿಸ್ಪೆಡ್ ಆದಕೂಡಲೇ ಅದರ ಬಗ್ಗೆ ಕೂಡ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾನು ಇಲಾಖೆಯನ್ನು ವಹಿಸಿಕೊಂಡ ನಂತರ ಮೈಸೂರು, ಬೆಂಗಳೂರು ಮತ್ತು ಬೀದರ್‌ನಲ್ಲಿರುವಂಥ ಎಲ್ಲಾ ಕೈಗಾರಿಕೆಗಳಲ್ಲಿ ಪರಿಸರ ಮಾಲಿನ್ಯ ಉಂಟುಮಾಡುತ್ತಿದೆಯೇ ಎಂದು ತಿಳಿಯುವ ಸಲುವಾಗಿ ಪ್ರತ್ಯಕ್ಷ ಭೇಟಿಕೊಟ್ಟಿದ್ದೇನೆ. ಕೆಲವೊಂದು ಕೈಗಾರಿಕೆಗಳಿಂದ ಆಗುವಂಥ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ ರೆಕ್ಟಿಫೈ ಕೂಡ ಮಾಡುತ್ತಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಸ್ಟೋನ್ ಕ್ರಷರ್ ಬಗ್ಗೆ ಕಳೆದ ಸಲ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಸ್ಟೋನ್ ಕ್ರಷರ್ ಕೆಲಸವನ್ನು ನಿಲ್ಲಿಸಬೇಕು, ಅಲ್ಲಿ ಮಾಡುತ್ತಿರುವುದು ಸರಿಯಲ್ಲವೆಂದು ತಾವು ಆದೇಶ ಕೊಟ್ಟಿದ್ದೀರಿ. ಹಾಗೆಯೇ ಸ್ಟೋನ್ ಕ್ರಷರ್ ಕೆಲಸವನ್ನು ನಿಲ್ಲಿಸಬೇಕೆಂದು ಸಂಬಂಧಪಟ್ಟ ಕಾರ್ಯದರ್ಶಿಯವರು, ಪರಿಸರ ಇಲಾಖೆಯವರು ಆದೇಶ ಕೊಟ್ಟಿದ್ದಾರೆ. ಮಾನ್ಯ ಸೋಮಣ್ಣನವರೂ ಕೂಡ ಇದರ ಬಗ್ಗೆ ನಿಲ್ಲಿಸಬೇಕೆಂದು ಹೇಳಿದ್ದಾರೆ. ಗ್ರಾಮಸ್ಥರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದರೂ ಕೂಡ ಅಲ್ಲಿ ಕೆಲಸ ನಡೆಯುತ್ತಿದೆ. ಇಷ್ಟೆಲ್ಲಾ ಸರ್ಕಾರಿ ಆಜ್ಞೆ ಆಗಿ ಸ್ಟೋನ್ ಕ್ರಷರ್ ಕೆಲಸ ನಡೆಯುತ್ತಲೇ ಇದೆ. ಇವತ್ತಿಗೂ ಕೂಡ ನಡೆಯುತ್ತಿದೆ. ಇದನ್ನು ಮಾನ್ಯ ಮಂತ್ರಿಗಳಿಂದ ಏಕೆ ನಿಲ್ಲಿಸುವುದಕ್ಕೆ ಆಗಲಿಲ್ಲ ?

ಶ್ರೀ ಎ.ಬಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಹಿರಿಯ ಸದಸ್ಯರಾದ ಮಾನ್ಯ ಶಿವಪ್ಪನವರು ಇವತ್ತು ನನಗೆ ಹೇಳಿದ್ದರು. ಅದಕ್ಕೆ ತಕ್ಷಣ ಕ್ರಮ ತೆಗೆದು ಕೊಂಡು ಬಂದ್ ಮಾಡಿದ್ದೇವೆ. ಪುನಃ ಅದನ್ನು ಏನಾದರೂ ಪ್ರಾರಂಭ ಮಾಡಿದರೆ ಸರ್ಕಾರದಿಂದ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಜಿಲ್ಲಾ ಪಂಚಾಯತಿಗಳಲ್ಲಿ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ ಇರತಕ್ಕ ನೀತಿ ನಿಯಮಗಳು

224(1519)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೧. ಜಿಲ್ಲಾ ಪಂಚಾಯತಿಗಳಿಗೆ ಪೀಠೋಪಕರಣಗಳನ್ನು ಖರೀದಿಸಲು ಅನುಸರಿಸುವ ನೀತಿ ನಿಯಮಗಳೇನು ?

೨. ಅರಣ್ಯ ಕೈಗಾರಿಕಾ ನಿಗಮದಿಂದ ಪೀಠೋಪಕರಣಗಳನ್ನು ಖರೀದಿ ಮಾಡಬೇಕೆಂದು ಸರ್ಕಾರದ ಸುತ್ತೋಲೆ ಇದ್ದರೂ ಸಹ ಇದನ್ನು ನಿರ್ಲಕ್ಷ್ಯ ಮಾಡಲು ಕಾರಣಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು.):

(೧) ಸರ್ಕಾರದ ಆದೇಶ ನಂ. ಆರ್‌ಡಿಪಿ 936 ಜಡ್‌ಪಿಎಸ್ 95ದಿ : 12-1-96ರಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯ್ತಿಗೂ ಖರೀದಿ ಸಮಿತಿಯನ್ನು ರಚಿಸಲಾಗಿದೆ. ಕರ್ನಾಟಕ ಜಿಲ್ಲಾ ಪಂಚಾಯತ್ (ಕಾರ್ಯಕಲಾಪಗಳು) ನಿಯಮಗಳು 1998ರ ನಿಯಮ 16ರಲ್ಲಿ ಖರೀದಿ ಸಮಿತಿಯ ವಿವರಣೆಗಳು ಈ ಕೆಳಗಿನಂತಿವೆ.

1) ಖರೀದಿ ಸಮಿತಿಯ ಮುಂದೆ ಅಥವಾ ಯಾವುದೇ ವಸ್ತುವಿನ ಖರೀದಿಯನ್ನು ಅನುಮೋದಿಸಲು ಅಧಿಕಾರ ನೀಡಲಾದ ಯಾವುದೇ ಇತರ ಸಮಿತಿಯ ಮುಂದೆ ಸಾಮಗ್ರಿಗಳ ಖರೀದಿಗಾಗಿ ಪ್ರಸ್ತಾವನೆಗಳನ್ನು ಇಟ್ಟಾಗ ಅದರ ಜೊತೆಯಲ್ಲಿ ತಪ್ಪದೇ ಸಾಮಗ್ರಿಗಳ ಖರೀದಿಗಾಗಿ ಇರುವ ಅಗತ್ಯ ದಾಸ್ತಾನು ಏನಾದರೂ ಇದ್ದರೆ ಅದರ ಈಗಿನ ಸ್ಥಿತಿ ಒಂದು ಸಮಂಜಸ ಕಾಲಾವಧಿಯವರೆಗೆ ಸಾಮಗ್ರಿಯ ಅಂದಾಜು ಅಗತ್ಯ. ಯಾವ ಮೂಲದಿಂದ ಸದರಿ ಖರೀದಿಯನ್ನು ಮಾಡಲು ಉದ್ದೇಶಿಸಲಾಗಿದೆ ಅನುಸರಿಸಬೇಕಾದಂತಹ ಕಾರ್ಯವಿಧಾನ, ನಿಧಿಯ ಲಭ್ಯತೆ ಮತ್ತು ಇಂತಹದೇ ಇತರ ವಿಷಯಗಳನ್ನು ವಿವರಿಸುವ ಒಂದು ವಿವರವಾದ ಜ್ಞಾಪನಾ ಪತ್ರ ಇರತಕ್ಕದ್ದು.

2) ಇಲಾಖೆಯ ತಕ್ಷಣದ ಅಗತ್ಯಕ್ಕಿಂತ ಹೆಚ್ಚಾಗಿ ಮತ್ತು ಬಜೆಟ್ ವಿರ್ಪಾಟು ಅಥವಾ ಆ ಉದ್ದೇಶಕ್ಕಾಗಿ ಲಭ್ಯವಿರುವ ಖರೀದಿಗಳನ್ನು ಮೀರಿ ಸಾಮಗ್ರಿಗಳನ್ನು ಖರೀದಿಸದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳತಕ್ಕದ್ದು

೨. ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರ ನಿರ್ದಿಷ್ಟವಾದ ಉತ್ತರವನ್ನು ನೀಡಿಲ್ಲ. ಸರ್ಕಾರಿ ಸಂಸ್ಥೆಗಳ, ಅರೆಸರ್ಕಾರಿ ಸಂಸ್ಥೆಗಳ ಅಥವಾ ಸಹಕಾರಿ ಸಂಘಗಳ ಮುಖಾಂತರ ವಸ್ತುಗಳನ್ನು ಖರೀದಿಸುವುದು ಸಾಮಾನ್ಯ ರೂಢಿ. ಮತ್ತು ಇದೇ ರೀತಿ ನಡೆದುಕೊಳ್ಳಬೇಕೆಂದು ಸರ್ಕಾರ ಕೂಡ ಇದಕ್ಕೆ ನಿರ್ದೇಶನ ನೀಡಿದೆ. ಆದರೆ ಜಿಲ್ಲಾ ಪಂಚಾಯತ್‌ಗಳು ವಸ್ತುಗಳನ್ನು ಖರೀದಿಸುವಾಗ ಸರ್ಕಾರ ಕೊಟ್ಟ ನಿರ್ದೇಶನವನ್ನು ಪಾಲನೆ ಮಾಡುತ್ತಿಲ್ಲ. ಇದರಿಂದ ಸಹಕಾರಿ ಸಂಘಗಳು, ಅರೆಸರ್ಕಾರಿ ಸಂಸ್ಥೆಗಳು, ಅರಣ್ಯ ನಿಗಮಗಳು ನಷ್ಟದಲ್ಲಿ ನಡೆಯುತ್ತಿರುವುದರಿಂದ ತಾವು ಜಿಲ್ಲಾಪಂಚಾಯತಿಗೆ ನಿರ್ದೇಶನ ಏಕೆ ಕೊಡಬಾರದು ? ಅಲ್ಲಿದ್ದವರಿಗೆ ಮರದ ಅನುಭವ ಉಂಟು. ಶಾಲೆಗಳಿಗೆ ಬೇಕಾದಂಥ ಪೀಠೋಪಕರಣಗಳನ್ನು ಅವರ ಮುಖಾಂತರ ತೆಗೆದುಕೊಂಡರೆ ಹೆಚ್ಚು ಅನುಕೂಲ ಆಗುತ್ತದೆ. ಮತ್ತು ಸಣ್ಣ ಕೈಗಾರಿಕೆಗಳು ಅವರಿಗೆ ನಿರ್ಧಾರಾತ್ಮಕವಾದ ದರ ಹಾಕುತ್ತಾರೆ. ಆದ್ದರಿಂದ ಅವರಿಂದ ತೆಗೆದುಕೊಳ್ಳಬಹುದು. ಆದ್ದರಿಂದ ಈ ಬಗ್ಗೆ ತಾವು ಇಲ್ಲಿಂದಲೇ ಕೊಂಡುಕೊಳ್ಳಬೇಕೆಂದು ನಿರ್ದೇಶನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಜಿಲ್ಲಾ ಪಂಚಾಯತ್ (ಕಾರ್ಯಕಲಾಪ) ನಿಯಮಾವಳಿ 16ರ ಪ್ರಕಾರ ಪ್ರತಿಯೊಂದು ಇಂಥ ಖರೀದಿ ಸಾಮಗ್ರಿಗಳನ್ನು ತೆಗೆದುಕೊಳ್ಳಬೇಕಾದರೆ ಖರೀದಿ ಉಪಸಮಿತಿಯ ಮುಂದೆ ಇಂಥವನ್ನು ಪ್ರಸ್ತಾಪ ಮಾಡಬೇಕು. ತೆಗೆದುಕೊಳ್ಳುವಂಥ ಕಾರಣ, ಮತ್ತು ಅಲ್ಲಿರುವಂಥ ನಮ್ಮ ಆಯವ್ಯಯದಲ್ಲಿ ಅದಕ್ಕಾಗಿ ಒದಗಿಸಿರುವಂಥ ಅನುದಾನ ಇದರ ಜೊತೆಗೆ ಅದರ ಅಗತ್ಯತೆ ಇದೆಯೇ ಎನ್ನುವಂಥ ವಿಚಾರಗಳ ಕುರಿತಾಗಿಯೂ ಕೂಡ ಒಂದು ಟಿಪ್ಪಣಿಯನ್ನು ಅವರು ಕೊಡತಕ್ಕಂಥದ್ದೂ ಕೂಡ ಇದೆ. ಇವನ್ನು ನಿಯಮಾವಳಿಗಳಲ್ಲಿ ಸ್ಪಷ್ಟೀಕರಣ ಮಾಡಿದ್ದೇವೆ. ಅರಣ್ಯಾಭಿವೃದ್ಧಿ ಕೈಗಾರಿಕಾ ನಿಗಮದಿಂದಲೇ ಇವನ್ನೆಲ್ಲಾ ಖರೀದಿ ಮಾಡಬೇಕೆಂದು ಈಗ ಮಾನ್ಯ ಸದಸ್ಯರು ಕೊಟ್ಟಿರುವಂಥ ಸಲಹೆ ರೀತಿಯಲ್ಲಿ ಈಗಾಗಲೇ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಆ ರೀತಿಯಾದಂಥ ನಮ್ಮ ಸುತ್ತೋಲೆಯ ಮಾರ್ಗಸೂಚಿ ಮತ್ತು ನಿರ್ದೇಶನವನ್ನು ತಪ್ಪಿ ಬೇರೆ ಕಡೆಯಿಂದ ಅಂದರೆ ಖಾಸಗಿಯವರಿಂದ ತೆಗೆದುಕೊಂಡಿರುವಂಥ ಉದಾಹರಣೆಯನ್ನು ನನ್ನ ಗಮನಕ್ಕೆ ತಂದರೆ ಆ ರೀತಿ ತೆಗೆದು ಕೊಂಡಂಥವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ತಮ್ಮ ಮೂಲಕ ಮತ್ತೊಂದು ಸಲ ಅರಿಕೆ ಮಾಡಿಕೊಳ್ಳುತ್ತೇನೆ ಮತ್ತು ಎಲ್ಲಾ ಅಧಿಕಾರಿಗಳು ಕೂಡ ಇಂಥ ವಿಚಾರದಲ್ಲಿ ಜಾಗ್ರತೆವಹಿಸಿ ನಮ್ಮ ಸರ್ಕಾರಿ ಸ್ವಾಮ್ಯದಲ್ಲಿರುವಂಥ ಅಭಿವೃದ್ಧಿ ನಿಗಮದ ಮೂಲಕ ಕಡ್ಡಾಯವಾಗಿ ಖರೀದಿ ಮಾಡಬೇಕೆಂದು ಹೇಳಿ ಎಚ್ಚರಿಕೆಯನ್ನು ಕೊಡುತ್ತೇನೆ ಹಾಗೂ ಮತ್ತೊಂದು ಸಲ ಪುನರುಚ್ಚೀಕರಣದ ಸುತ್ತೋಲೆಯನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಕಳೆದ ಹಲವು ವರ್ಷಗಳಿಂದ ಅರಣ್ಯ ನಿಗಮದಿಂದ ತೆಗೆದುಕೊಳ್ಳಲಿಲ್ಲ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಪದೇ ಪದೇ ತರುತ್ತಿದ್ದೇನೆ.

ಅಧ್ಯಕ್ಷರು : ತಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆಂಯ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಮತ್ತೆ ವಿವರಣೆ ಏನೂ ಬೇಡ ಅಷ್ಟು ತೃಪ್ತಿದಾಯಕವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಾ ವಿಚಾರವನ್ನು ಸಮಗ್ರವಾಗಿ ಅವರೇ ಹೇಳಿಬಿಟ್ಟಿದ್ದಾರೆ.

ಶ್ರೀ. ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ಆದೇ ಹೇಳುತ್ತಿದ್ದೇನೆ. ಕಳೆದ ಮೂರು ವರ್ಷದಿಂದ ಅರಣ್ಯ ಅಭಿವೃದ್ಧಿ ಕೈಗಾರಿಕಾ ನಿಗಮದಿಂದ ಖರೀದಿ ಮಾಡಲಿಲ್ಲ.

ಅಧ್ಯಕ್ಷರು : ನೀವು ಮಾನ್ಯ ಮಂತ್ರಿಗಳನ್ನು ಅಭಿನಂದಿಸಿ ಯಾವುದಾದರೂ ಆ ತರಹದ ಲಕ್ರಮ ನಡೆದಿದ್ದರೆ ದಯವಿಟ್ಟು ಅವರ ಗಮನಕ್ಕೆ ತನ್ನಿ. ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಕುಂದಾಪುರ ತಾಲ್ಲೂಕಿನ ಶಂಕರ ನಾರಾಯಣ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ.

226(1645)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಯೇ ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ನಿವಾರಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು ?